**O.S. No.106/2016. DW-1**

ದಿನಾಂಕ:**19.12.2024** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

<u>ಪಾಟೀ ಸವಾಲು:</u> ವಾದಿಯರ ಪರ ಶ್ರೀ ಹೆಚ್ ಟಿ ಆರ್ ವಕೀಲರಿಂದ:-

ನಾನು 2007 ರಿಂದ ದಂತ ವೈದ್ಯನಾಗಿ ಪ್ರಾಕ್ಟೀಸ್ ಮಾಡುತ್ತಿದ್ದೇನೆ. ನಾನು ಬಿ ಡಿ ಎಎಸ್ ಮತ್ತು ಎಂ ಡಿ ಎಸ್ ಪದವಿಧರನಾಗಿರುತ್ತೇನೆ. ನಾನು ಬಿ ಡಿ ಎಸ್ ಅನುನ ದಾವಣಗೆರೆ ಕಾಲೇಜ್ ಆಫ್ ಡೆಂಟಲ್ ಸೈನ್ಸ್ ಮತ್ತು ಎಂ ಡಿ ಎಸ್ ಅನ್ನು ಮಾಸ್ಕೋ ಸ್ಟೇಟ್ ಯೂನಿವರ್ಸಿಟಿ ಆಫ್ ಮೆಡಿಸಿನ್ ಆಂಡ್ ಡೆಂಟಿಸ್ಟ್ ಟ್ರೀ ಮಾಸ್ಕೋ ರಷ್ಯಾದಲ್ಲಿ ಮಾಡಿರುತ್ತೇನೆ. ನನಗೆ ಬಿ ಡಿ ಎಸ್ ಮಾಡಲು ನನಗೆ 2-ಎ ಮೀಸಲಾತಿರಡಿಯಲ್ಲಿ ಉಚಿತ ಪ್ರವೇಶಾತಿ ಸಿಕ್ಕಿರುತ್ತದೆ. ನಾನು 2-ಎ ಕೆಟಗೆರಿಗೆ ಸೇರಿರುತ್ತೇನೆ, ನನ್ನ ಶಾಲಾ ದಾಖಲಾತಿಗಳಲ್ಲಿ ನನ್ನ ಜಾತಿ 2-ಎ ಕೆಟಗೆರಿ ಎಂದು ನಮೂದು ಇರುತ್ತದೆ.

ನನ್ನ ನೈಸರ್ಗಿಕ ತಂದೆಯ ಹೆಸರು ದಾಸಪ್ಪ. ಸದರಿ ದಾಸಪ್ಪ ರವರಿಗೆ ನಾನು ಮತ್ತು ನನ್ನ ಅಣ್ಣ ಅಂದರೆ D 1(a) ಇಬ್ಬರು ಮಕ್ಕಳು. ನನ್ನ ತಾಯಿ ಕಮಲಮ್ಮ, ಅವರ ತವರು ಮನೆ ಕಡೂರು. ನನ್ನ ತಾಯಿ ಮತ್ತು ವಾದಿ ಅಕ್ಕ-ತಮ್ಮ ಎಂದರೆ ಸರಿ. ಕಮಲಮ್ಮ, ವಾದಿ ಹಾಗೂ ಅವರ ಕುಟುಂಬದವರು 2-ಎ ಕೆಟಗೆರಿಗೆ ಸೇರಿದವರು. ಕುರುಬ ಜಾತಿಯು 2-ಎ ಕೆಟಗೆರಿಗೆ ಸೇರುತ್ತದೆ ಎಂದರೆ ಸರಿ. ಕಾಡು ಕುರುಬ ಎಂಬ ಜಾತಿಯು ಎಸ್.ಟಿ. ಕೆಟಗೆರಿಗೆ ಸೇರುತ್ತದೆ ಎಂದರೆ ಇರಬಹುದು.

ವಾದಿಯ ತಂದೆಯ ಹೆಸರು ಈರುಳಯ್ಯ ಎಂದರೆ ಸರಿ. ಸದರಿ ಈರುಳಯ್ಯ ರವರಿಗೆ 6 ಜನ ಗಂಡು ಮತ್ತು 2 ಹೆಣ್ಣು ಮಕ್ಕಳು, ಅವರುಗಳೆಂದರೆ ಗಂಗಾಧರಪ್ಪ, ಲೇಟ್ ಮಲ್ಲೇಶಪ್ಪ, ಚಂದ್ರಮ್ಮ, ನನ್ನ ತಾಯಿ ಲೇಟ್ ಕಮಲಮ್ಮ, ಮರಿಯಪ್ಪ, ಹಿರಿಯಣ್ಣ, ಡಾ: ಕುಮಾರಸ್ವಾಮಿ, ಕೆ.ಇ.ಮಂಜುನಾಥ. ನನ್ನ ತಾಯಿ 2015 ರಲ್ಲಿ ಮೃತಪಟ್ಟಿರುತ್ತಾರೆ. ಈ ದಾವೆ ಸಲ್ಲಿಸುವ ಪೂರ್ವದಲ್ಲಿಯೇ ನನ್ನ ತಾಯಿ ಮೃತಪಟ್ಟಿದ್ದರು ಎಂದರೆ ಸರಿ.

ದಾವಾ ಅನುಸೂಚಿ ಎ ಸ್ವತ್ತು ವಾದಿಗೆ ವಿಭಾಗದಲ್ಲಿ ಬಂದಿದ್ದು ಅದು ಅವರ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿ.

ದಾವಾ ಅನುಸೂಚಿ ಬಿ ಸ್ವತ್ತು ನನ್ನ ತಾಯಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ, ಸಾಕ್ಷಿಯು ಸದರಿ ಸ್ವತ್ತು ನನ್ನ ತಾಯಿಗೆ ಅವರ ತವರು ಮನೆಯಿಂದ ವಿಭಾಗದಲ್ಲಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ತವರು ಮನೆಯಿಂದ ಬಂದ ಆಸ್ತಿ ಅವರ ಸ್ವಯಾರ್ಜಿತ ಆಸ್ತಿಯಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ.

ನಾನು ಎಷ್ಟನೇ ವಯಸ್ಸಿನಲ್ಲಿ ಇದ್ದಾಗ ನನ್ನ ತಂದೆಯು ನನ್ನನ್ನು ನನ್ನ ದೊಡ್ಡಪ್ಪ ರಂಗಯ್ಯ ರವರಿಗೆ ದತ್ತು ನೀಡಿರುತ್ತಾರೆ ಎಂದರೆ ಸಾಕ್ಷಿಯು ಸುಮಾರು ನಾನು 8 ರಿಂದ 10 ನೇ ವಯಸ್ಸಿನಲ್ಲಿದ್ದಾಗ ನೀಡಿರಬಹುದು, ನಿಖರವಾಗಿ ಗೊತ್ತಿಲ್ಲ. ನನ್ನ ತಂದೆಗೆ 4 ಜನ ಅಣ್ಣ-ತಮ್ಮಂದಿರು, ಅವರಲ್ಲಿ ನನ್ನ ತಂದು ತಂದೆಯವರು ಸಹಃ ಒಬ್ಬರು. ನನ್ನನ್ನು ದತ್ತು ನೀಡಿದ ಉದ್ದೇಶ ನನಗೆ ಗೊತ್ತಿಲ್ಲ. ನನ್ನನ್ನು ದತ್ತು ನೀಡುವ ಪೂರ್ವದಲ್ಲಿಯೇ ರಂಗಯ್ಯ ಡಿ ರವರಿಗೆ 2 ಜನ ಗಂಡು ಮಕ್ಕಳು ಇದ್ದರು, ನನ್ನನ್ನು ದತ್ತು ಪಡೆದ ಕಾಲದಲ್ಲಿ ಅವರ ಒಬ್ಬ ಮಗ ಮೃತಪಟ್ಟಿರುತ್ತಾರೆ.

ನನ್ನ ಶಾಲಾ ದಾಖಲಾತಿಗಳಲ್ಲಿ ನನ್ನ ತಂದೆಯ ಹೆಸರು ಡಿ.ರಂಗಯ್ಯ ಎಂದು ನಮೂದು ಇದೆ. ದಾವಾ ಅನುಸೂಚಿ ಎ ಸ್ವತ್ತು ಕಮಲಮ್ಮ ರವರ ಮರಣದ ನಂತರ ಸದರ ಸ್ವತ್ತು ಅವರ ದಾಸಪ್ಪ ರವರಿಗೆ ವರ್ಗಾವಣೆಯಾಗಿರುತ್ತದೆ ಎಂದರೆ ಸರಿ. ನನ್ನನ್ನು ದತ್ತು ನೀಡಿದ ನಂತರ ನನ್ನ ನೈಸರ್ಗಿಕ ತಾಯಿ ಕಮಲಮ್ಮ ರವರ ಮೃತಪಟ್ಟ ನಂತರ ಸದರಿ ಕಮಲಮ್ಮ ರವರ ವಾರಸುದಾರರು ಯಾರು ಯಾರು ಎಂದರೆ ಸಾಕ್ಷಿಯು ನಾನು, ನನ್ನ ತಂದೆ ಮತ್ತು ನನ್ನ ಅಣ್ಣ ಎಂದು ನುಡಿಯುತ್ತಾರೆ.

ನನ್ನ ದತ್ತು ತಂದೆ ರಂಗಯ್ಯ ರವರು ನನ್ನ ನೈಸರ್ಗಿಕ ತಂದೆಯವರ ಜೊತೆಯೇ ಬಂದು ವಾಸವಿದ್ದರು. ನಾವೆಲ್ಲರು ಒಟ್ಟಿಗೆ ದಾಸಪ್ಪ ರವರು ಸಹಾಯಕ ಕಾರ್ಯಪಾಲಕ ಅಬಿಯಂತರರು, ಮೆಸ್ ಕಾಂ ನಲ್ಲಿ ಅರಸೀಕೆರೆ - ಹಾಸನ - ಬೇಲೂರು ಇಲ್ಲಿ ಕೆಲಸ ಮಾಡುತ್ತಿದ್ದರಿಂದ ನಾವುಗಳೆಲ್ಲರು ಅವರಿಗೆ ವರ್ಗಾವಣೆಯಾದ ಕಡೆಗೆ ಹೋಗಿ ವಾಸಮಾಡುತ್ತಿದ್ದೇವು.

ನಿಪಿ 2 ಕ್ರಯ ಒಪ್ಪಂದ ಕರಾರು ಪತ್ರ ಮತ್ತು ನಿಡಿ 1 ದಾನಪತರದಲ್ಲಿ ಸಾಕ್ಷಿಯಾಗಿ ನನ್ನ ಸಹಿ ಇದೆ ಎಂದರೆ ಸರಿ. ಡಿ.ದಾಸಪ್ಪ ರವರು ಈ ದಾವೆ ಚಾಲ್ತಿಯಲ್ಲಿರುವಾಗ ದಿಃ20.01.2018 ರಂದು ವಯೋಸಹಜವಾಗಿ ಸದರಿಯವರಿಗೆ ಸುಮಾರು 71 ವರ್ಷ ವಯಸ್ಸಾಗಿದ್ದಾಗ ನಮ್ಮ ಮನೆಯಲ್ಲಿ ಮೃತಪಟ್ಟಿರುತ್ತಾರೆ. ದಾಸಪ್ಪರವರು ಸಾಯುವಾಗ Parkinson's ಖಾಯಿಲೆ ಇದ್ದ ಕಾರಣ ಅವರಿಗೆ ನಡೆದಾಡಲು ಆಗುತ್ತಿರಲಿಲ್ಲ. ದಾಸಪ್ಪ ರವರು ಸಾಯುವ ಸುಮಾರು 3-4 ವರ್ಷಗಳ ಹಿಂದನಿಂದಲೇ Parkinson's ಖಾಯಿಲೆ ಇತ್ತು. ದಾಸಪ್ಪ ರವರು ಸಾಯುವ ಪೂರ್ವದಲ್ಲಿ ನನ್ನ ಅಣ್ಣ ಶ್ರೀನಿವಾಸ ಮೈಸೂರಿನಲ್ಲಿ ಇದ್ದರು. ನನ್ನ ತಂದೆ ದಾಸಪ್ಪ ಮತ್ತು ನನ್ನ ಅಣ್ಣ ಶ್ರೀನಿವಾಸ ಅನ್ಯೂನ್ಯವಾಗಿ ಇದ್ದರು ಎಂದರೆ ಸರಿಯಲ್ಲ. ದಾಸಪ್ಪ ರವರಿಗೆ ಅವರ ಮಗನಾದ ಎಂ ಡಿ ಶ್ರೀನಿವಾಸ ರವರ ಮೇಲೆ ಪ್ರೀತಿ ವಿಶ್ವಾಸ ವಿತ್ತು ಎಂದರೆ ಸರಿಯಲ್ಲ. ಎಂ ಡಿ ಶ್ರೀನಿವಾಸ ರವರು 2000 ನೇ ಇಸವಿಯಲ್ಲಿ ವಿವಾಹವಾದ ನಂತರದಿಂದ ನಮ್ಮ ಕುಟುಂಬದಲ್ಲಿ ವಿವಾದಗಳು ಪ್ರಾರಂಭವಾಗಿ ನನ್ನ ತಂದೆ ಮತ್ತು ಅವರ ನಡುವೆ ಸಂಬಂಧ ಸರಿ ಇರಲಿಲ್ಲ.

ನೀನು ನನ್ನ ತಮ್ಮನಾಗಿರುವ ಕಾರಣ ದಾವಾ ಬಿ ಅನುಸೂಚಿ ಸ್ವತ್ತನ್ನು ನಿನಗೆ ಮಾರಾಟ ಮಾಡುತ್ತೇನೆ, ನೀನು ಅಲ್ಲಿ ಶಾಪಿಂಗ್ ಕಾಪ್ಲೆಕ್ಸ್ ಕಟ್ಟಬಹುದು ಎಂದು ನನ್ನ ತಾಯಿ ವಾದಿಯ ಹೆಸರಿಗೆ ನಿಪಿ2 ರಂತೆ ಕ್ರಯ ಕರಾರು ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 2 ನ್ನು ನನ್ನ ತಾಯಿಯು ವಾದಿಯ ಹೆಸರಿಗೆ ಬರೆದುಕೊಟ್ಟ ಒಪ್ಪಂದ ಕ್ರಯ ಕರಾರು ಪತ್ರ ಎಂದರೆ ಸರಿ. ನಿಪಿ2 ದಾವಾ ಬಿ ಅನುಸೂಚಿ ಸ್ವತ್ತಿಗೆ ಸಂಬಂಧಪಟ್ಟಿದ್ದು ಎಂದರೆ ಸರಿ. ನಿಪಿ 2 ರಲ್ಲಿ ಕಾಣಿಸಿರುವ ಸ್ವತ್ತಿನ ಪ್ರತಿಫಲದ ಹಣದ ಬದಲಿಗೆ ವಾದಿಯು ನನ್ನ ತಾಯಿಯ ಹೆಸರಿಗೆ ನನ್ನ ತಾಯಿ ಕಮಲಮ್ಮ ರವರು ತಿಳಿಸಿದ್ದರಿಂದ ನಿಡಿ 1 ನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ದಾವಾ ಬಿ ಅನುಸೂಚಿ ಸ್ವತ್ತು ಮರವಂಜಿ ರಸ್ತೆಯಲ್ಲಿ ಇದ್ದು, ಅದು ಸದರಿ ರಸ್ತೆಯ ಮಧ್ಯಭಾಗದಿಂದ 70 ಅಡಿ ಮಾರ್ಜಿನ್ ರಸ್ತೆಗೆ ಹೋಗುತ್ತದೆ ಸ್ವಲ್ಪ ಭಾಗ ಮಾತ್ರ ಕಮಲಮ್ಮ ರವರಿಗೆ ಉಳಿದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 70 ಅಡಿ ಜಾಗ ರಸ್ತೆಗೆ ಹೋಗಿರುವ ವಿಚಾರ ನನ್ನ ತಾಯಿಗೆ ಗೊತ್ತಿದ್ದರು ಸಹ ವಾದಿಗೆ ಮೋಸ ಮಾಡುವ ಉದ್ದೇಶದಿಂದ ದಾವಾ ಬಿ ಅನುಸೂಚಿ ಸ್ವತ್ತನ್ನು ಅವರ ಹೆಸರಿಗೆ ಒಪ್ಪಂದ ಕರಾರು ಪತ್ರ ಮಾಡಿಕೊಟ್ಟು ನಂತರ ನಿಡಿ 1 ರಂತೆ ದಾನ ಪತ್ರ ಬರೆಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಅನುಮತಿ ನೀಡಿ ಮುಂದೂಡಲಾಯಿತು.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.